

ಡಾ.ವಿನೋದ ಛೆಬ್ಬಿ

ಸ್ವಚ್ಛಂದವಾಗಿ ಹೊರಹರಿಯ ಬೇಕಾದ ಕಾಮಪ್ರವೃತ್ತಿಯು ಕರ್ತವ್ಯಪ್ರಜ್ಞೆಗೆ ಒಳಗಾದಾಗ ಏನಾಗುತ್ತದೆ?

# 100: ಸ್ಪಂದನೆ-ಪ್ರತಿವರ್ತನೆ

ಹೊಂದಾಣಿಕೆ ಇರುವ ದಾಂಪತ್ಯಗಳಲ್ಲೂ ಸಂಭೋಗದ ಬಯಕೆಯು ವಿರಳವಾಗಿರುವುದರ ಬಗೆಗೆ ಹೋದಸಲ ಮಾತಾಡುತ್ತಿದ್ದೆವು. ಕಾಮಾಸಕ್ತಿಯು ಪ್ರತಿಯೊಬ್ಬರ ಹುಟ್ಟು ಪ್ರವೃತ್ತಿಯಾಗಿದ್ದರೂ ಕೆಲವು ಬದ್ಧಸಂಬಂಧಗಳಲ್ಲಿ ಕಾಣಿಸಿಕೊಳ್ಳದಿರಲು ಏನು ಕಾರಣವಿರಬಹುದು ಎಂಬುದನ್ನು ಪರಿಶೀಲಿಸೋಣ.

ಅಮಲಾ ಹಾಗೂ ಅಂಗದ್ (ಹೆಸರುಗಳು ಕೇವಲ ಕಾಲ್ಪನಿಕ) ಅವರದು ಶಸ್ತ್ರ ವೈದ್ಯರ ಜೋಡಿ. ಇಬ್ಬರೂ ಪ್ರೀತಿಸಿ ಅಲ್ಲದಿದ್ದರೂ ಇಷ್ಟಪಟ್ಟು ಮದುವೆಯಾಗಿದ್ದಾರೆ. ಹೊಂದಾಣಿಕೆ ಅದ್ಭುತವಾಗಿದೆ. ಅಂಗದ್ ಸರಳ ಸ್ವಭಾವದವನು. ಅಮಲಾಳ ಜೊತೆಗೆ ಶಸ್ತ್ರಚಿಕಿತ್ಸೆಯಿಂದ ಹಿಡಿದು ಮನೆಗೆಲಸ, ಮಗುವಿನ ಪಾಲನೆಯ ತನಕ ಎಲ್ಲದರಲ್ಲೂ ಸಹಾಯ ಮಾಡುತ್ತ ಸಮಭಾಗಿಯಾಗಿದ್ದಾನೆ. ಆದರೆ ಕೂಟಕ್ಕೆ ಬಂದರೆ ಮಾತ್ರ ಅವಳಿಗೆ ಪ್ರಶ್ನೆಯಾಗುತ್ತಾನೆ. ಯಾಕೆ? ಅಮಲಾಳ ಪ್ರಕಾರ ಅಂಗದನಿಗೆ ಕಾಮಾಸಕ್ತಿ ಇಲ್ಲವೆಂದರೂ ನಡೆಯುತ್ತದೆ. ಅವನಾಗಿಯೇ ಅವಳನ್ನು ಸಮೀಪಿಸಿದ್ದೇ ಇಲ್ಲ. ಆದರೆ ಅವಳೇ ಕರೆದಾಗ ಯಾವೊತ್ತೂ ಇಲ್ಲವೆಂದಿಲ್ಲ. ಅದರಲ್ಲೂ ಒಂದು ವಿಷಾದಕರ ವೈಚಿತ್ರ್ಯವಿದೆ. ಆಕೆಯನ್ನು ಉದ್ರೇಕಿಸುವಾಗ ಅವನು ಉಪಯೋಗಿಸುವ ಕ್ರಮಗಳು ತೀರಾ ಹಳೆಯ ನೋಟುಗಳಂತೆ – ಮುಖಬೆಲೆ ಕಳೆದುಕೊಳ್ಳದಿದ್ದರೂ ಬೆಲೆ ಕಳೆದುಕೊಂಡಂತಿದ್ದು, ಮುಟ್ಟಲು ಮನಸ್ಸಾಗದಿದ್ದರೂ ಬಳಕೆ ಅನಿವಾರ್ಯವಾಗಿದೆ. ಅವರ ಕಾಮಕೂಟದ ಹೆಜ್ಜೆಗಳು ಆಕೆಗೆ ಎಷ್ಟು ರೂಢಿಯಾಗಿವೆ ಎಂದರೆ, ಮುಂದಿನ ಎರಡು ನಿಮಿಷಗಳಲ್ಲಿ ಆತ ಪ್ರತಿ ಸೆಕೆಂಡು ಏನು ಮಾಡಲಿದ್ದಾನೆ ಎಂಬುದನ್ನು ಕರಾರುವಾಕ್ಕಾಗಿ ಮುನ್ನುಡಿಯಬಲ್ಲಳು. (ಇದನ್ನು ವರ್ಣಿಸುತ್ತಿರುವಾಗ ನನ್ನ ಮುಖದಲ್ಲಿ ಸಂದೇಹ ಕಂಡಳೇನೋ. ನನ್ನತ್ತ ಬೆರಳು ತೋರಿಸುತ್ತ ಹೇಳಿದಳು: 'ಡಾಕ್ಟರ್, ನಾವು ಹಾಸಿಗೆಯಲ್ಲಿ ಮಾಡುವುದರ ವಿಡಿಯೋ ತೆಗೆದು ತೋರಿಸಿದರೆ ನಿಮಗೂ ಬೋರ್ ಆಗಿ ಆಕಳಿಸುತ್ತೀರಿ!') ಕಾರ್ಯಕ್ರಮವು ಇಬ್ಬರಿಗೂ ಶಾರೀರಿಕ ತೃಪ್ತಿ ಕೊಟ್ಟರೂ ಅವಳಿಗೆ ಮೈ ಬಿಸಿಯೇರುವುದಿಲ್ಲ; ಮನ ತಣಿಯುವುದೂ ಇಲ್ಲ. ಆನಂತರ ಕೆಲವೊಮ್ಮೆ ಅವನನ್ನು ಜೊತೆಗೆ ಮಲಗಿಕೊಳ್ಳಲು ಕರೆಯುತ್ತಾಳೆ. ಆತ ಇಲ್ಲವೆನ್ನುವುದಿಲ್ಲ. ಆದರೆ ಅಲ್ಲಿಯೂ ಅಷ್ಟೆ. ಅಪ್ಪುಗೆಯಿದ್ದರೂ ಬಿಸಿಯಿಲ್ಲ, ಮೈ ನವಿರೇಳಿಸುವ ರೋಚಕತೆಯ ಅನುಭವವು ಹತ್ತು ವರ್ಷಗಳಲ್ಲಿ ಒಂದುಸಲವೂ ಆಗಿಲ್ಲ. ಬಯಕೆಯ ಹಪಾಹಪಿಕೆಗೆ ಹತಾಶೆಯ ಫಲಶ್ರುತಿಯೇ ನಿಯಮವಾಗಿ, ಕಾಮಕೂಟಕ್ಕೇ ಪೂರ್ಣವಿರಾಮ ಇಡಬೇಕೆಂದು ಯೋಚಿಸುತ್ತಿರುವಾಗ ತರುಣ ಸಹೋದ್ಯೋಗಿಯೊಂದಿಗೆ ಅಮಲಾಳ ಸಲಿಗೆ ಬೆಳೆಯುತ್ತಿದೆ. ಆತ ಇವಳ ಮೈಮಾಟದ ಮೇಲೆ ಕಣ್ಣು ಓಡಿಸುತ್ತ, ನನಗಿಂತಲೂ ಚಿಕ್ಕವಳಾಗಿ ಕಾಣುತ್ತೀಯಾ ಎಂದು ಏಕವಚನದಲ್ಲಿ ಸಂಬೋಧಿಸಿದಾಗ ಇವಳಿಗೆ ಮೈಜುಮ್ಮೆನಿಸಿದೆ. ಪರಸಂಗದ ಕಲ್ಪನೆ ಒತ್ತರಿಸಿದೆ. ಅದಕ್ಕೆಲ್ಲಿ ಬಲಿಯಾಗಿಬಿಡುತ್ತೇನೋ ಎಂದು ದಿಗಿಲಾಗಿ ಅಂಗದನೆದುರು ಹೇಳಿಕೊಂಡು, ಇಬ್ಬರೂ ನನ್ನನ್ನು ತುರ್ತಾಗಿ ಕಂಡಿದ್ದಾರೆ.

ಅಮಲಾ ಮಾತಾಡುತ್ತ ತನ್ನ ಅತ್ಯಂತ ಕಟು ಅನುಭವವನ್ನು ಮನಸ್ಸು ಕಲಕುವಂತೆ ಹೇಳಿಕೊಳ್ಳುತ್ತಾಳೆ: 'ಅಂಗದ್ ನನ್ನನ್ನು ತಯಾರು ಮಾಡುತ್ತಾನಲ್ಲವೆ? ಅವನ ಜತೆಗೆ ಒಂದಾಗುವ ಕ್ಷಣಕ್ಕೆ ಹಾತೊರೆಯುತ್ತಿರುವಾಗ, ಏನು ಮಾಡ್ತಾನೆ ಗೊತ್ತಾ? ಎಲ್ಲ ಚಲನೆಗೆ ಬ್ರೇಕ್ ಹಾಕಿ, ಇನ್ನು ಸೆಕ್ಸ್ ಮಾಡೋಣವೆ ಎನ್ನುತ್ತ ನನ್ನ ಒಪ್ಪಿಗೆಗೆ ಕಾಯ್ತಾನೆ! ನನಗೆ ಮೈಯೆಲ್ಲ ಉರಿಯುತ್ತದೆ. ತಾನೇ ಏಕೆ ಮುಂದುವರಿಯಬಾರದು? ಇವನು ತಾನಾಗಿಯೇ ಬಯಸಿ ಹಾತೊರೆಯುವಂಥದ್ದು ನನ್ನಲ್ಲೇನೂ ಇಲ್ಲವೆ?'

ಅಮಲಾ ತನ್ನ ನೋವನ್ನು ತೋಡಿಕೊಳ್ಳುತ್ತಿರುವಾಗ ಅಂಗದನನ್ನು ಗಮನಿಸುತ್ತಿರುತ್ತೇನೆ. ಆತ ಒಂದು ಸಲ ನನ್ನನ್ನು, ಇನ್ನೊಂದು ಸಲ ಆಕೆಯನ್ನು ನೋಡುತ್ತಾನೆ. ಆಕೆ ಮಾತು ಮುಗಿಸಿದ್ದು ಖಚಿತಪಡಿಸಿಕೊಂಡು ನಂತರ ಬಾಯಿಬಿಡುತ್ತಾನೆ. ಅವನ ಮಾತಿನಲ್ಲಿ ತರ್ಕವಿದೆ, ಹೆಂಡತಿಯ ಬಗೆಗೆ ಕಾಳಜಿಯಿದೆ. ಅವಳಿಗೆ ತೃಪ್ತಿಯಾಗುತ್ತಿಲ್ಲ ಎನ್ನುವ ಆತಂಕವೂ ಇದೆ. ಆಕೆ ಅನ್ನುವುದನ್ನೆಲ್ಲ ಮರುಪ್ರಶ್ನೆ ಹಾಕದೆ ಒಪ್ಪುತ್ತಾನೆ. 'ಹಾಗಾದರೆ ಹೆಚ್ಚಿನ ಸುಖ ಕೊಡಲು ನಾನು ಇನ್ನೇನು ಮಾಡಬೇಕು ಹೇಳಿ ಸರ್, ಮಾಡಲು ತಯಾರಾಗಿದ್ದೇನೆ' ಎನ್ನುತ್ತಾನೆ. ಆತ ಕರ್ತವ್ಯನಿಷ್ಠೆ ಮೆರೆಯುವುದನ್ನು ಕಂಡು ಆಕೆ ಹಣೆ ಚಚ್ಚಿಕೊಳ್ಳುತ್ತಾಳೆ. ಅವನು ದಿಕ್ಕುತೋಚದೆ ಕಂಗೆಟ್ಟು ನನ್ನತ್ತ ನೋಡುತ್ತಾನೆ.

ನಾನು ಇನ್ನಷ್ಟು ವಿಷಯ ಗ್ರಹಿಸುತ್ತೇನೆ. ಅವನು ಅವಳೊಡನೆ ಕಾಮಕೂಟದಲ್ಲಿ ಪ್ರತಿಕ್ರಿಯಿಸಲು ಹೊರಡುವಾಗ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ ಎಂಬುದು ಮೇಲುನೋಟಕ್ಕೆ ಎದ್ದುಕಾಣುತ್ತದೆ. ಹಾಗಾದರೆ ಅವನೊಬ್ಬನೇ ಏಕಾಂತದಲ್ಲಿ ಇರುವಾಗ ಹೇಗಿರುತ್ತದೆ? ವೈಯಕ್ತಿಕವಾದ ಕಾಮಾಸಕ್ತಿ ಇರುತ್ತದೆಯೆ? ಹಾಗಿದ್ದರೆ ಅವನೇನು ಮಾಡುತ್ತಾನೆ?

ಯಾವುದೇ ಗಂಡಿಗಿರುವಂತೆ ಅಂಗದನಿಗೂ ಆರೋಗ್ಯಕರ ಎನ್ನಿಸುವಂಥ ಕಾಮದ ಬಯಕೆಯಿದೆ. ಒಬ್ಬನೇ ಆರಾಮವಾಗಿ ಇರುವಾಗ ಸ್ವೇಚ್ಛೆಯಿಂದ ಕಾಮವನ್ನು ಹರಿಬಿಟ್ಟು, ತನಗೆ ಇಷ್ಟವಾದ ನಿರ್ದಿಷ್ಟ ರೀತಿಯಲ್ಲಿ ತೊಡಗಿ ತೃಪ್ತಿ ಹೊಂದುತ್ತಾನೆ– ಈ ರೀತಿಯು ಮೊದಲಿನಿಂದಲೂ ಅಭ್ಯಾಸವಾಗಿದ್ದು, ಅದನ್ನು ಬಿಟ್ಟು ಬೇರೆ ಯಾವುದೂ ಸರಿಹೋಗುವುದಿಲ್ಲ. ಅದು ಸರಿ, ಹೆಂಡತಿಯ ಜೊತೆಗೆ ಇರುವಾಗ? ಅವಳ ಕಡೆಗೆ, ಅವಳ ತೃಪ್ತಿಯ ಕಡೆಗೆ ಗಮನ ಹರಿಸುತ್ತಾನೆ. ಆಗ ತನ್ನಕಡೆಗೆ ಗಮನ ಕೊಡುವುದು ಅಷ್ಟು ಸಾಧು ಎನ್ನಿಸುವುದಿಲ್ಲ– ಆಗಲೇ ಅವನ ಕರ್ತವ್ಯನಿಷ್ಠೆ ತಲೆಯೆತ್ತುತ್ತದೆ.

ಹೆಂಡತಿಯ ಜೊತೆಗಿರುವಾಗ, ಅವಳ ಬಯಕೆಗೆ ಸ್ಪಂದಿಸುತ್ತಿರುವಾಗ ತನ್ನ ಬಯಕೆಯನ್ನೂ ಹೊರತರುತ್ತ, ಅದನ್ನೂ ಪೂರೈಸಿಕೊಳ್ಳಲು ಮನಸ್ಸು ಮಾಡಬಹುದಲ್ಲವೆ? ಅದಕ್ಕೆ ಅಂಗದನ ನೇರವಾದ ಉತ್ತರ: ಸಂಗಾತಿಯ ಬಯಕೆಯನ್ನು ಪೂರೈಸುವಾಗ ಅವಳಿಷ್ಟಕ್ಕೆ ತಕ್ಕಂತೆ ವರ್ತಿಸುತ್ತ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ತನ್ನಿಷ್ಟದಂತೆ ವರ್ತಿಸುವುದಕ್ಕೆ ಅವಕಾಶ ಇಲ್ಲವಲ್ಲ? ನನಗರ್ಥವಾಯಿತು. ಅವನು ಏನೆನ್ನುತ್ತಿದ್ದಾನೆ ಎಂಬುದನ್ನು ಸ್ಪಷ್ಟೀಕರಿಸಲು ಉದಾಹರಣೆ: ದೊಡ್ಡ ಹಾಸಿಗೆಯಲ್ಲಿ ಒಬ್ಬರೇ ಮಲಗುವ ಅವಕಾಶ ಸಿಕ್ಕಿದಾಗ ನಮಗಿಷ್ಟ ಬಂದಂತೆ ಕೈಕಾಲು ಚಾಚಿ ಮಲಗುವುದರಲ್ಲಿ ಒಂದು ರೀತಿಯ ಸುಖವಿದೆ. ಅದೇ ಸಂಗಾತಿಯನ್ನು ಮಲಗಿಸಿಕೊಳ್ಳಬೇಕಾದರೆ ಇನ್ನೊಂದು ಬಗೆಯ ಸುಖವಿದೆ. ಆದರೆ ಸಂಗಾತಿಗೆ ಅವಕಾಶ ಕೊಡಬೇಕಾದರೆ ಸ್ವೇಚ್ಛೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ!

ಇಲ್ಲೇನು ನಡೆಯುತ್ತಿದೆ? ಈ ಗಂಡು ತಾನೊಬ್ಬನೇ ಕಾಮತೃಪ್ತಿ ಆರಾಮವಾಗಿ ಹೊಂದಬಲ್ಲ. ಹೆಣ್ಣಿಗೂ ತೃಪ್ತಿ ಕೊಡಬಲ್ಲ. ಆದರೆ ಹೆಣ್ಣಿನ ಸಾನ್ನಿಧ್ಯದಲ್ಲಿ ತನ್ನ ತೃಪ್ತಿಯನ್ನು ಹುಡುಕಿಕೊಳ್ಳಲಾರ!

ಹೀಗೇಕೆ? ತನ್ನೊಳಗೆ ಹುಟ್ಟುವ ಕಾಮದ ಸ್ವಯಂಸ್ಫೂರ್ತಿಯನ್ನು ಸಂಗಾತಿಯ ಜೊತೆಗೆ ಹಂಚಿಕೊಳ್ಳುವಾಗ ಸ್ಪಂದನ, ಸಹಸ್ಪಂದನ ನಡೆಯುತ್ತದೆ. ಸ್ವಯಂಸ್ಫೂರ್ತಿ ಇಲ್ಲದಿರುವಾಗ ಸಂಗಾತಿಯ ಅಪೇಕ್ಷೆಯನ್ನು ಪೂರೈಸುವ ಏಕಕ್ರಿಯೆ ನಡೆಯುತ್ತದೆ. ಸ್ವಯಂಸ್ಫೂರ್ತಿ ಇದ್ದರೆ ಸ್ಪಂದನ, ಸಹಸ್ಪಂದನ; ಅದಿಲ್ಲದಿದ್ದರೆ ಪ್ರತಿವರ್ತನೆ, ಕರ್ತವ್ಯನಿಷ್ಠೆ!

ಕಾಮವು ಸ್ವಯಂಸ್ಫೂರ್ತಿಯನ್ನು ಕಳೆದುಕೊಂಡು ನೇಪಥ್ಯ ಸೇರಲು ಏನು ಕಾರಣ, ಇದೆಲ್ಲಿಂದ ಬರುತ್ತದೆ ಎಂಬುದನ್ನು ಮುಂದಿನ ಸಲ ನೋಡೋಣ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org